ಶ್ರೀ ಕೆ.ಜೆ.ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಹೌದು

ಆ) 40 ಎಸ್ ಆರ್ ಹೆಚ್ ಎಸ್ ಮನೆಗಳನ್ನು ಕಟ್ಟಲಾಗಿದೆ. ಮನೆಯೊಂದಕ್ಕೆ ನಿಗದಿತ ಬೆಲೆಯು ರೂ 6352.00.

ಇ) 21.

ಈ) ರೂ. 40,500.00.

ಉ) ರೂ. 6,352.00.

ಊ) ಇದನ್ನು ಪರಿಶೀಲಿಸಲಾಗುವುದು.

ಅಧ್ಯಕ್ಷರು : ಉತ್ತರಗಳನ್ನು ಮಂಡಿಸಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಪರ್ಮಿಷನ್ ತೆಗೆದುಕೊಂಡಿದ್ದೇನೆ. ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಬೇಕು.

ಜನ್ಮ ದಿನದ ಶುಭಾಶಯಗಳು

ಅಧ್ಯಕ್ಷರು : ನನಗೆ ಒಂದು ಪ್ರಕಟಣೆಗೆ ಅವಕಾಶ ಮಾಡಿಕೊಡಿ.

ಇಂದು ಮಾನ್ಯ ಸದಸ್ಯರಾದ ಶ್ರೀ ಕಟ್ಟಿ ಉಮೇಶ ವಿಶ್ವನಾಥ್ ಅವರ ಜನ್ಮ ದಿನ. ಅವರಿಗೆ ಸದನದ ಪರವಾಗಿ ಮತ್ತು ನನ್ನ ಪರವಾಗಿ ಹಾರ್ದಿಕ ಶುಭಾಶಯಗಳು.

ಯುಗಾದಿ ಹಬ್ಬದ ಪ್ರಯುಕ್ತ ಹೆಚ್ಚುವರಿ ಪಡಿತರ ವಸ್ತುಗಳನ್ನು ನೀಡುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಪ್ರತಿ ವರ್ಷವೂ ಕಾರ್ಡ್‌ದಾರರಿಗೆ ಯುಗಾದಿ ಹಬ್ಬದ ಸಮಯದಲ್ಲಿ ಸಕ್ಕರೆ, ಅಕ್ಕಿ ಮತ್ತು ಪಾಮೋಲಿನ್ ಎಣ್ಣೆಯನ್ನು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಕೊಡತಕ್ಕದ್ದು ಪದ್ಧತಿಯಾಗಿತ್ತು. ಆದರೆ ಈ ವರ್ಷ ಏನಾಗಿದೆ ಎಂದರೆ, ಅಧಿವೇಶನ ಪ್ರಾರಂಭವಾದ ಸಂದರ್ಭದಲ್ಲಿ ಮಾನ್ಯ ಆಹಾರ ಮಂತ್ರಿಗಳ ಗಮನಕ್ಕೆ ತಂದು ನೀವು ಕೊಡತಕ್ಕದ್ದೆಲ್ಲಾ ಬರೀ ಆಶ್ವಾಸನೆಗಳು ಎಂದು ಹೇಳಿದೆ. ಸದನ ನಡೆಯುತ್ತಿರುವಾಗಲೇ ಡೆಲ್ಲಿಗೆ ಹೋಗಿಬರುತ್ತೇನೆ ಅಕ್ಕಿ ಹೆಚ್ಚು ಮಾಡುತ್ತೇನೆ. ಪಾಮೋಲಿನ್ ಎಣ್ಣೆ ಹೆಚ್ಚು ಮಾಡುತ್ತೇನೆ, ಸಕ್ಕರೆ ಹೆಚ್ಚು ಮಾಡುತ್ತೇನೆ ಎಂಬ ಭರವಸೆ ಕೊಟ್ಟು ಹೋದರು. ಈಗಾಗಲೇ ಅಧಿವೇಶನ ಪ್ರಾರಂಭವಾಗಿ 14 ದಿನ ಆಯಿತು. ನಾಡಿದ್ದು ಯುಗಾದಿ ಹಬ್ಬ. ಈ ಸಾರಿ ಕೊಡಬೇಕಾದ ಕೋಟಾದಲ್ಲೂ ಸಹ ಸಕ್ಕರೆ ಮತ್ತು ಪಾಮೋಲಿನ್ ಎಣ್ಣೆ ಇನ್ನೂ ಕಾರ್ಡ್‌ದಾರರಿಗೆ ಕೊಟ್ಟಿಲ್ಲ. ನಾಡಿದ್ದು ಅವರು ಹಬ್ಬ ಆಚರಣೆ ಮಾಡಬೇಕು. ನೀವು ಹೆಚ್ಚಿಗೆ ಕೊಡುವುದು ಬೇಡ ಈ ವಾರದಲ್ಲಿ ಕೊಡುವುದನ್ನಾದರೂ ಕೊಡುವುದಕ್ಕೆ ಸಾಧ್ಯವೇ ಎಂದು ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಇಡೀ ಕರ್ನಾಟಕ ರಾಜ್ಯದಲ್ಲಿ ಈ ಹಬ್ಬ ಬರುವುದಕ್ಕಿಂತ ಮೊದಲು ಕಾರ್ಡ್‌ದಾರರಿಗೆ ಕೊಡುವುದನ್ನು ಕೊಟ್ಟು ಇನ್ನೂ ಎರಡು ಕೆ.ಜಿ. ಹೆಚ್ಚು ಸಕ್ಕರೆ ಕೊಡುತ್ತಿದ್ದರು. ಈಗ ಸಕ್ಕರೆ ಹೆಚ್ಚು ಕೊಡುವ ಪ್ರಶ್ನೆ ಇಲ್ಲವೇ ಇಲ್ಲ, ಆಹಾರ ಸಚಿವರು ಎಲ್ಲಿದ್ದಾರೆಂದು ಗೊತ್ತಿಲ್ಲ. ಇವತ್ತು ಪಾಮೋಲಿನ್ ಆಯಿಲ್ ಸಪ್ಲೈ ಇಲ್ಲ, ಸಕ್ಕರೆ ಕೊಡುತ್ತಾ ಇಲ್ಲ. ಈ ಬಗ್ಗೆ ಸರ್ಕಾರದಿಂದ ಸ್ಟೇಟ್‌ಮೆಂಟ್ ಬೇಕು. ಇವತ್ತು ಹೆಚ್ಚುವರಿ ಅಲ್ಲ, ಕಾರ್ಡಿಗೆ ಕೊಡಬೇಕಾದ್ದನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು : ನಾಳೆ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಯುಗಾದಿ ಹಬ್ಬದಲ್ಲಿ ಬೇವು ಮತ್ತು ಬೆಲ್ಲ ತಿನ್ನುವುದು ಒಂದು ಸಂಪ್ರದಾಯ. ಆದರೆ ಇವರು ಬರೀ ಬೇವನ್ನೇ ಕೊಡುತ್ತಿದ್ದಾರೆ, ಬೆಲ್ಲ ಇಲ್ಲವೇ ಇಲ್ಲ. ಇವತ್ತು ಸಕ್ಕರೆ ಕೊಡುತ್ತಿಲ್ಲ. ಇದು ಬರೀ ಬೆಂಗಳೂರಿಗೆ ಸೀಮಿತವಲ್ಲ. ಎಲ್ಲಾ ಹಳ್ಳಿಗಳಲ್ಲಿ, ಪಟ್ಟಣ ಪ್ರದೇಶಗಳಲ್ಲಿ ಹೀಗೆ ಆಗಿದೆ. ಎಣ್ಣೆ ಕೊಡುತ್ತಿಲ್ಲ. ಆಹಾರ ಕೊಡುತ್ತಿಲ್ಲ. ಕೊನೆಗೆ ನೀರೂ ಕೊಡುತ್ತಿಲ್ಲ. ಸರ್ಕಾರ ಇದಕ್ಕೆ ಏನು ವ್ಯವಸ್ಥೆ ಮಾಡಿದೆ? ಆಹಾರ ಮಂತ್ರಿಗಳು ಎಲ್ಲದಕ್ಕೂ ಈಗ ಬಂತು, ಇನ್ನು 5 ನಿಮಿಷಕ್ಕೆ ಬರುತ್ತದೆ, ಮನೆಗೆ ಕಳುಹಿಸಿದ್ದೇವೆ ಎಂದು ಹೇಳುತ್ತಾರೆ. ಇವತ್ತು ಎಣ್ಣೆ ತಲುಪಿಲ್ಲ, ಆಹಾರ ತಲುಪಿಲ್ಲ, ಅಕ್ಕಿ ತಲುಪಿಲ್ಲ, ಸಕ್ಕರೆ ತಲುಪಿಲ್ಲ. ಸರ್ಕಾರ ಈ ಬಗ್ಗೆ ಕಾಳಜಿ ವಹಿಸಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸದಸ್ಯರು ಅಪೇಕ್ಷಿಸಿದಂತೆ ಯುಗಾದಿ ಹಬ್ಬದ ಪ್ರಯುಕ್ತ ಸನ್ಮಾನ್ಯ ಆಹಾರ ಮಂತ್ರಿಗಳಿಂದ ನಾವು ವಿಶೇಷವಾದ ಪ್ರಕಟಣೆಯನ್ನು ಒಂದು ಹೇಳಿಕೆ ಮುಖಾಂತರ ಇವತ್ತು ಅಥವಾ ನಾಳೆ ಮಾಡಿಸುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಪ್ರತಿದಿನ ಪ್ರಕಟಣೆ. ಇದು ಹೇಳಿಕೆ ಅಲ್ಲ. ಈ ರೀತಿಯ ಹಾರಿಕೆ ಉತ್ತರ ಸರ್ಕಾರದಿಂದ ಬೇಡ. ನಮಗೆ ಬೇಕಾಗಿರತಕ್ಕದ್ದು ಸಕ್ಕರೆ, ಸಕ್ಕರೆ ಬೇಕು, ಅಕ್ಕಿ ಬೇಕು, ಎಣ್ಣೆ ಬೇಕು, ಆಹಾರ ಮಂತ್ರಿಗಳು ಹೇಳಿಕೆ ಕೊಡುತ್ತಾರೆ ಎಂದರೆ ಸಮಸ್ಯೆ ಬಗೆಹರಿಯುವುದಿಲ್ಲ.

ಅಧ್ಯಕ್ಷರು : ಯುಗಾದಿ ಪ್ರಯುಕ್ತ ಬೇವು ಬೆಲ್ಲ ಎಲ್ಲಾ ಸೇರಿಸಿ ನಾಳೆ ಪ್ರಕಟಣೆ ಕೊಡುತ್ತಾರೆ. ನಾಳೆ ಸ್ಟೇಟ್‌ಮೆಂಟ್ ಮಾಡುತ್ತಾರೆ ಎನ್ನುವ ಭರವಸೆಯನ್ನು ನಾನು ಸಭೆಗೆ ಕೊಡುತ್ತೇನೆ

ಶ್ರೀ ವಾಟಾಳ್ ನಾಗರಾಜ್ : ಅವರ ಪ್ರಕಟಣೆಯಿಂದ...

ಅಧ್ಯಕ್ಷರು : ಅವರು ತಂದುಕೊಡುವುದಕ್ಕಾಗುತ್ತದೆಯೇ. ಸ್ಟೇಟ್‌ಮೆಂಟ್ ಮೂಲಕವೇ ಎಲ್ಲಾ ಆಗಬೇಕಾಗಿರುವುದು.

ಶ್ರೀ ವಾಟಾಳ್ ನಾಗರಾಜ್ : ಇದುವರೆಗೂ ಅವರು ಸ್ಟೇಟ್‌ಮೆಂಟ್ ಮಾಡುತ್ತಾ ಬಂದಿದ್ದಾರೆ. ಆದರೆ ಅವರು ಏನೂ ಮಾಡಿಲ್ಲ. ನೀವು ಸ್ಟೇಟ್‌ಮೆಂಟ್ ಬೇಡ ಎಂದರೆ ಸ್ಟೇಟ್‌ಮೆಂಟ್ ಬೇಡಬಿಡಿ.

ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಮಾನ್ಯ ಮುಖ್ಯ ಮಂತ್ರಿಗಳು

MR. SPEAKER : I am told tomorrow he is going to make a statement with reference to that.

ಕೋಲಾರ ಜಿಲ್ಲೆಯಲ್ಲಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ರೈತರು ಉಪವಾಸ ಸತ್ಯಾಗ್ರಹ ಮಾಡುತ್ತಿರುವುದು.

+ಶ್ರೀ ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮೊನ್ನೆ ದಿವಸ ನಾನು ಉಪಾಧ್ಯಕ್ಷರನ್ನು ಭೇಟಿ ಮಾಡಿ ನಮ್ಮ ಜಿಲ್ಲೆಯಲ್ಲಿ ಭಾನುವಾರದಿಂದ ವಿದ್ಯುತ್ ಸರಬರಾಜು ಆಗದಿರುವ ಬಗ್ಗೆ ಹೇಳಿದ್ದೇನೆ. ನಮ್ಮ ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಆಗುತ್ತಾ ಇಲ್ಲ. ಇದರ ಬಗ್ಗೆ ನಾನು ಅನೇಕ ಸಾರಿ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಇಲ್ಲೂ ಕೂಡಾ ಚರ್ಚೆಯಾಗಿದೆ. ಈ ಬಗ್ಗೆ ಮುಖ್ಯ ಮಂತ್ರಿಗಳ ಮನೆ ಎದುರಿಗೆ ಧರಣಿ ಸತ್ಯಾಗ್ರಹ ಕೂಡಾ ಮಾಡಿದ್ದಾಯಿತು. ಆದರೂ ಕೂಡ ಇದುವರೆವಿಗೂ ಪರಿಸ್ಥಿತಿ ಸುಧಾರಣೆಯಾಗಿಲ್ಲ. ಕಳೆದ 3 ದಿವಸಗಳಿಂದ ಟಿ.ವಿ.